ಶಿವಮೊಗ್ಗ ನಗರ ವ್ಯಾಪ್ತಿಯಲ್ಲಿನ ಕೊಳಚೆ ಪ್ರದೇಶಗಳಲ್ಲಿ ಕುಟೀರ ಜ್ಯೋತಿ ಅನುಷ್ಠಾನ

3529(3341) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ನಗರ ವ್ಯಾಪ್ತಿಯಲ್ಲಿರುವ "ಕುಟೀರ ಜ್ಯೋತಿ" ಫಲಾನುಭವಿಗಳ ಸಂಖ್ಯೆ ಎಷ್ಟು :

ಆ) ಈ ಯೋಜನೆಯ ಉಪಯೋಗ ಮಂಡಳಿಯ ವಾಂಬೇ ಹಾಗೂ ಹುಡ್ಕೋ ಯೋಜನೆಗಳಿಗೆ ಸೀಮಿತಗೊಳಿಸಲಾಗಿದೆಯೇ :

ಇ) ಕೊಳಚೆ ಪ್ರದೇಶದಲ್ಲಿ ವಿದ್ಯುತ್ ಸಂಪರ್ಕ ಹೊಂದದೆ ಎಲ್ಲಾ ಬಡ ಕೊಳಚೆ ನಿವಾಸಿಗಳ ಮನೆಗಳಿಗೆ ಈ ಯೋಜನೆಯ ಅನುಕೂಲ ಕಲ್ಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

ಈ) ಶಿವಮೊಗ್ಗ ನಗರದ ಘೋಷಿತ ಕೊಳಚೆ ಪ್ರದೇಶಗಳ ವ್ಯಾಪ್ತಿಯಲ್ಲಿರುವ ವಿದ್ಯುತ್ ಸಂಪರ್ಕ ಹೊಂದದ ಮನೆಗಳ ಸಂಖ್ಯೆ ಎಷ್ಟು ; ವಿವರ ನೀಡುವುದು ?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ವಸತಿ ಸಚಿವರು):

ಅ) ಶಿವಮೊಗ್ಗ ನಗರ ವ್ಯಾಪ್ತಿಯಲ್ಲಿ ಬರುವ ಕೊಳಚೆ ಪ್ರದೇಶಗಳ ಪೈಕಿ ಕೆಳಕಂಡ ಕೊಳಚೆ ಪ್ರದೇಶದ 80 ಮನೆಗಳನ್ನು "ಕುಟೀರ ಜ್ಯೋತಿ" ಯೋಜನೆಯಡಿ ಆಯ್ಕೆ ಮಾಡಲಾಗಿದೆ

1.	ಟಿಪ್ಪುನಗರ ಕೆರೆ ಅಂಗಳ	–	48
2.	ಬೋವಿ ಕಾಲೋನಿ	–	20
3.	ಅಂಬೇಡ್ಕರ್ ನಗರ	–	12
	ಒಟ್ಟು		**80**

ಆ) ಈ ಯೋಜನೆಯು (ಬೆಂಗಳೂರು ನಗರ ಹೊರತುಪಡಿಸಿ) ರಾಜ್ಯದ ವಿವಿದೆಡೆ ಸರ್ಕಾರದ ವತಿಯಿಂದ ಕೈಗೊಳ್ಳಲಿರುವ ಆರ್ಥಿಕವಾಗಿ ದುರ್ಬಲ ವರ್ಗದವರಿಗಾಗಿ ಮನೆಗಳ ನಿರ್ಮಾಣದ ಎಲ್ಲಾ ಯೋಜನೆಗಳಿಗೆ (ವಾಂಬೆ ಹಾಗೂ ಹುಡ್ಕೋ ನೆರವಿನ ಯೋಜನೆ ಸೇರಿ) ಅನ್ವಯವಾಗಲಿದೆ.

ಇ) ಆರ್ಥಿಕವಾಗಿ ದುರ್ಬಲವರ್ಗದವರಿಗೆ ನಿರ್ಮಿಸಲಾಗಿರುವ ಮನೆಗಳಿಗೆ ಸರ್ಕಾರ ಕುಟೀರ ಜ್ಯೋತಿ ಯೋಜನೆ ಜಾರಿಗೊಳಿಸಲು ನಿರ್ಧರಿಸಿದೆ. ಸರ್ಕಾರ ನಿರ್ಮಿಸಿದ ಮನೆಗಳಿಗೆ ಮಾತ್ರ ಈ ಯೋಜನೆ ಅನ್ವಯಿಸುತ್ತಿದೆ.

ಈ) ಶಿವಮೊಗ್ಗ ನಗರದ 34 ಘೋಷಿತ ಕೊಳಚೆ ಪ್ರದೇಶದಲ್ಲಿ 4484 ಮನೆಗಳಿದ್ದು ಇವುಗಳ ಪೈಕಿ ವಿದ್ಯುತ್ ಸಂಪರ್ಕ ಸೌಲಭ್ಯ ಹೊಂದದ ಒಟ್ಟು ಮನೆಗಳ ಸಂಖ್ಯೆ 460.

ಚಿಂತಾಮಣಿ ನಗರದ ಆಸ್ಪತ್ರೆಗೆ ಔಷಧಿಗಳ ಕೊರತೆ

3530(3892) ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಂತಾಮಣಿ ನಗರದಲ್ಲಿ 100 ಹಾಸಿಗೆಗಳ ಸಾಮರ್ಥ್ಯದ ಆಸ್ಪತ್ರೆ ಸ್ಥಾಪಿತವಾಗಿದ್ದು, ಆಸ್ಪತ್ರೆಗೆ ಚಿಂತಾಮಣಿ ನಗರವೇ ಅಲ್ಲದೆ ಸುತ್ತಮುತ್ತಲಿನ ಗ್ರಾಮಾಂತರ ಪ್ರದೇಶಗಳಿಂದ ಅನೇಕ ಬಡ ರೋಗಿಗಳೊಳಗೊಂಡು ಕಾರ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ :

ಆ) ಈ ಆಸ್ಪತ್ರೆಗೆ ಬರತಕ್ಕಂತಹ ಬಡ ರೋಗಿಗಳಿಗೆ ಔಷಧಿಗಳನ್ನು ಸರ್ಕಾರ ಸಾಕಷ್ಟು ಒದಗಿಸದೇ

ಇದ್ದು, ಬಡ ರೋಗಿಗಳಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ :

ಇ) ಅತಿ ಮುಖ್ಯವಾದಂತಹ ಹಾವು ಕಡಿತಕ್ಕೆ ಔಷಧಿ ಮತ್ತು ಇತರೆ ಪ್ರಾಣಾಪಾಯದ ಸಂಕಟದಿಂದ ಪಾರಾಗಲು ಸರಿಯಾದ ಔಷಧಿಗಳು ಈ ಆಸ್ಪತ್ರೆಯಲ್ಲಿ ಸಿಕ್ಕದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ :

ಈ) ಆಸ್ಪತ್ರೆಗೆ ಈಗ ಒದಗಿಸತಕ್ಕಂತಹ ಔಷಧಿಗಳು ಸುಮಾರು ಆರು ತಿಂಗಳಿಗೂ ಕೂಡ ಸಾಕಾಗುವುದಿಲ್ಲವಾದ್ದರಿಂದ ಇದನ್ನು ಸರಿದೂಗಿಸಲು ಸೂಕ್ತ ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬಂದಿರುತ್ತದೆ.

ಆ) ಬಂದಿರುವುದಿಲ್ಲ.

ಇ) ಇಲ್ಲ

ಈ) ನಿಗದಿತ ಅನುದಾನಕ್ಕೆ ಸರಿಯಾಗಿ ಔಷಧಿ ಸರಬರಾಜು ಮಾಡಲಾಗಿದ್ದು, ತುರ್ತು ಸಂದರ್ಭಗಳಲ್ಲಿ ಔಷಧಿ ಕೊರತೆ ಕಂಡುಬಂದಲ್ಲಿ ಇನ್ನೂ ಹೆಚ್ಚಿನ ಔಷಧಗಳನ್ನು ಸರಬರಾಜು ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಬಾಗೇಪಲ್ಲಿ ತಾಲ್ಲೂಕ ಚೇಳೂರಿನ ಪದವಿ ಪೂರ್ವ ಕಾಲೇಜನ್ನು ವಜಾ ಮಾಡದೇ ಇರುವ ಬಗ್ಗೆ

3531(4060) ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಾಗೇಪಲ್ಲಿ ತಾಲ್ಲೂಕು ಚೇಳೂರಿನಲ್ಲಿ ಪದವಿ ಪೂರ್ವ ಕಾಲೇಜು ಕಾರಣಾಂತರಗಳಿಂದ ವಜಾ ಆಗಿ ಪುನಃ ದಿನಾಂಕ 29.8.2002ರಲ್ಲಿ ಮಾನ್ಯತೆಯನ್ನು ಸರ್ಕಾರದ ಆದೇಶದಂತೆ ನೀಡಿರುವುದು ನಿಜವೇ :

ಆ) ಈ ಪದವಿ ಪೂರ್ವ ಕಾಲೇಜಿನಲ್ಲಿ 2002–03ನೇ ಸಾಲಿನಲ್ಲಿ ಶೇ. 65ರಷ್ಟು ಉತ್ತೀರ್ಣರಾಗಿದ್ದರೂ ಸಹ ಈ ವರ್ಷ ಸರ್ಕಾರದ ಆದೇಶ ಬರದೇ ಇದಕ್ಕೆ 1ನೇ ಪಿ.ಯು.ಸಿ.ಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವುದಿಲ್ಲವೆಂದು ಪ್ರಾಂಶುಪಾಲರು ಹೇಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ :

ಇ) ಈ ಪದವಿ ಪೂರ್ವ ಕಾಲೇಜು ಚೇಳೂರಿನಿಂದ ಬೇರೆ ಪದವಿ ಪೂರ್ವ ಕಾಲೇಜುಗಳು ಚಿಂತಾಮಣಿ ಮತ್ತು ಬಾಗೇಪಲ್ಲಿಯಲ್ಲಿ ಬಿಟ್ಟರೆ ಬೇರೆ ಕಡೆ ಕಾಲೇಜು ಇರುವುದಿಲ್ಲ ಮತ್ತು ಈ ಎರಡು ಊರುಗಳಿಗೆ ಚೇಳೂರಿನಿಂದ 45 ಕಿ.ಮೀ. ದೂರ ಆಗುವುದು ಸರ್ಕಾರಕ್ಕೆ ತಿಳಿದಿದೆಯೇ :

ಈ) ಈ ಕಾಲೇಜಿನಲ್ಲಿ ಪಾಠ ಹೇಳುವ ಉಪನ್ಯಾಸಕರನ್ನು ಬೇರೆ ಕಡೆಗೆ ಡೆಪ್ಯೂಟೇಷನ್ ಮಾಡುವುದಲ್ಲದೇ ಪ್ರಾಧ್ಯಾಪಕರು ಸಹ ಸರಿಯಾಗಿ ಇಲ್ಲದೆ ಇರುವುದರಿಂದ ವಿದ್ಯಾರ್ಥಿಗಳ ಸಂಖ್ಯೆ ಕ್ಷೀಣಿಸುತ್ತಿರುವುದು ನಿಜವೇ :

ಉ) ಗ್ರಾಮಾಂತರ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಇರುವಂತಹ ಪದವಿ ಪೂರ್ವ ಕಾಲೇಜನ್ನು ಸರ್ಕಾರ ವಜಾ ಮಾಡದೇ ಮುಂದುವರಿಸುತ್ತಿದೆಯೇ ?